Fixing hand pumps to Berewells in Hassan District

91 SRI K.H. HANUME GOWDA (Hassan).— Will the Minister for Rural Development and Panchayati Raj be pleased to state :—

(*a*) the names of the towns of Kattaya Kasaba and Shantigrama hoblies of Hassan constituency where bore wells have been dug and hand pumps installed in order to alleviate the drinking water problem;

(*b*) the places where the hand pumps have gone out of order and since when?

SRI K. PRABHAKAR (Minister for Rural Development and Panchayati Raj).—

(*a*) The details are furnished in the statement placed on the Table. * *

(*b*)—

I. As on 28-3-1978 in Kattaya Hobli

(1) Doddagondagula (borewells closed due to mud collection)
(2) Echanahalli from 15 days
(3) Hanumanthapura from 8 days
(4) Busthenahalli from 4 days
(5) Samudravalli from 9 days
(6) Sathyamangala from 3 days

II. As on 28-3-1978 in Kasaba Hobli

(1) Doddabaganahalli from 8 days
(2) Doronahalli from 1 month
(3) Malladevanapura from 2 months
(4) Bachihalli from 15 days
(5) Bommenahalli from 3 days

III. As on 28-3-1978 in Shantigrama Hobli

(1) Ranganthapura from 15 days
(2) Hithalahalli from 8 days
(3) Konthagowdanahalli from 10 days
(4) Voddarakoppalu from 15 days
(5) Naganahalli from 3 days

* * Copy placed in the Karnataka Legislatiure Library *vide* No. 16/dated 22nd July 1978.

ಶ್ರೀ ಕೆ. ಎಚ್. ಹನುಮೇಗೌಡ.—ಬೋರ್‌ವೆಲ್‌ಗೆ ಹ್ಯಾಂಡ್‌ಪಂಪ್‌ಗಳನ್ನು ಹಾಕಿರುವುದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೆಟ್ಟು ಹೋಗುತ್ತಿರುವುದರಿಂದ ಅದಕ್ಕೆ ಬದಲಾಗಿ ರೌಂಡ್‌ವೀಲ್ ಫಿಕ್ಸ್ ಮಾಡಿದರೆ ಸ್ವಲ್ಪ ಉತ್ತಮಸೇವೆಯನ್ನು ಕೊಡುತ್ತವೆಂದು ತಜ್ಞರ ಅಭಿಪ್ರಾಯವಾಗಿರುವುದರಿಂದ ಕಳೆದಸಾರಿ ಇದರ ಹಿಂದೆ ಪ್ರಸ್ತಾಪಮಾಡಿತ್ತು. ಅದಕ್ಕೆ ತಮಿಂದ ಉತ್ತರವು ಕೂಡ ಬಂದಿತ್ತು. ಅದರೆ ಇಲ್ಲಿಯವರೆಗೆ ಎಷ್ಟು ರೌಂಡ್ ವೀಲ್ ಇರುವ ಪಂಪ್‌ಗಳನ್ನು ಫಿಕ್ಸ್ ಮಾಡಿಸಿದ್ದೀರಿ ?

†ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಹೇಳುವ ವಿಷಯ ಒಳ್ಳೆಯ ಉತ್ತಮವಾದ ಸಲಹೆ. ಆದರೆ ಇದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳು ಅದರ ಬಗ್ಗೆ ಉತ್ತಮ ಕಾರ್ಯಕ್ರಮ ಹಾಕಿಕೊಂಡು ಕ್ರಮ ಪಡುತ್ತಿದ್ದಾರೆ ತಾವು ಹೇಳಿದುದನ್ನು ಹೆಚ್ಚು ಹೆಚ್ಚು ಒದಗಿಸಲು ಪ್ರಯತ್ನಪಡುತ್ತಾ ಇದ್ದಾರೆಂದು ವರ್ತಮಾನವಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಕೆಲವು ಊರುಗಳಲ್ಲಿ ಪಂಪ್‌ಗಳು ಕೆಟ್ಟುಹೋಗಿ ೨–೩ ತಿಂಗಳಾಗಿದೆ. ೩ ತಿಂಗಳಾದರೂ ರಿಪೇರಿ ಆಗದೆ ಕುಡಿಯುವ ನೀರಿಗೆ ಬಹಳ ತೊಂದರೆ ಪಡುತ್ತಿರುತ್ತಾರೆ. ಬೋರ್‌ವೆಲ್ ಹಾಕಿಕೊಂಡಿರುವ ಮಲದೇವನಪುರ ಹಾಗೂ ದೋರನಹಳ್ಳಿಯಲ್ಲಿ ಬೋರ್‌ವೆಲ್ ಪಂಪು ಕೆಟ್ಟು ತುಂಬಾ ದಿವಸಗಳು ಆಗಿದ್ದರೂ ಅದನ್ನು ರೀಪೆರಿಮಾಡದೆ ಅಲ್ಲಿಯ ಜನಗಳಿಗೆ ಕುಡಿಯುವ ನೀರಿಗೆ ಬಹಳ ತೊಂದರೆ ಆಗಿದೆ ಆದ್ದರಿಂದ ಇದರ ಬಗ್ಗೆ ಕೂಡಲೇ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪುತ್ತೇನೆ. ನಮ್ಮ ಅಧಿಕಾರಿಗಳು ಹಾಗೂ ತಜ್ಞರು ಕೂಡ ಈ ರಿಪೇರಿ ಮಾಡಲು ಶ್ರಮಪಡುತ್ತಿದ್ದಾರೆ. ಲೋಕಲ್‌ನಲ್ಲಿ ಏನೇನು ಅನುಕೂಲಗಳು ಇವೆ ಅವುಗಳ ಮುಖಾಂತರ ಅವರಿಗೆ ಸಹಾಯ ಮಾಡಲು ಶ್ರಮವಹಿಸುತ್ತಿದ್ದಾರೆ. ಅಲ್ಲಿಯ ಜನರಿಗೆ ಕಷ್ಟವಾಗುತ್ತದೆ ಎನ್ನುವ ಬಗ್ಗೆ ಅವರಿಗೆ ಅರಿವು ಇದೆ. ಅದನ್ನು ನೋಡಿ ಸಾಧ್ಯವಾದಷ್ಟು ಮಟ್ಟಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಶ್ರಮಪಡುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಬೋರ್‌ವೆಲ್‌ಗಳಲ್ಲಿ ಮಡ್ ಕಲೆಕ್ಷನ್ ಇದ್ದು ತೊಂದರೆಯಾಗಿದೆ ಎಂದು ಹೇಳುತ್ತಾರೆ. ಆ ರೀತಿ ಬೋರ್‌ವೆಲ್ ಅನುಪಯುಕ್ತವಾದರೆ ತಕ್ಷಣ ಯಾರಾದರೂ ಅದನ್ನು, ನಿವಾರಿಸುವುದಕ್ಕೆ ಹಾಗೂ ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಆದೇಶಕೊಟ್ಟಿದ್ದೀರಾ ಸ್ವಾಮಿ ?

ಶ್ರೀ ಕೆ. ಪ್ರಭಾಕರ್.—ಇತ್ತೀಚೆಗೆ ಪರಿಶೀಲನೆಮಾಡಿದ್ದಾರೆ ಬೋರ್‌ವೆಲ್ ಚೋಕ್ ಅಪ್ ಆದಾಗ ಬಹಳ ಕಷ್ಟವಾಗುತ್ತದೆ. ಅದಕ್ಕೋಸ್ಕರ ಹೊಸದಾಗಿ ಒಂದು ಬೋರ್‌ವೆಲ್ ತೆಗೆಯುವುದು ಉತ್ತಮವೆಂದು ಬೇರೆ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಮುಂಚೆ ಟಿಡಿಬಿ ಯವರು ಏನಾದರೂ ಬೋರ್‌ವೆಲ್‌ಗಳು ಕೆಟ್ಟುಹೋದರೆ ಅವುಗಳನ್ನು ರೀಪೆರಿ ಮಾಡುವ ಸಲುವಾಗಿ ಕೆಲವು ಸಲಕರಣೆಗಳನ್ನು ಹಾಗೂ ಕೆಲವು ತಜ್ಞರನ್ನು ಸಹ ಇಟ್ಟುಕೊಂಡು ಸಹಾಯಮಾಡುತ್ತಿದ್ದರು ಆದರೆ ಇತ್ತೀಚೆಗೆ ಆ ವ್ಯವಸೆಯನ್ನು ಪಿ ಎಚ್ ಇ ಯವರಿಗೆ ವಹಿಸಿ ಆದೇಶ ಕೊಟ್ಟಿದ್ದಾರೆ. ಇದರಿಂದ ಏನಾಗಿದೆಯೆಂದರೆ ಈ ಪಿ ಎಚ್ ಇ ಯವರು ಇಡೀ ಡಿಸ್ಟ್ರಿಕ್ಟ್‌ನ್ನು ವಹಿಸಿಕೊಂಡು ಇರುವುದರಿಂದ ಅವರು ಸರಿಯಾಗಿ ಎಲ್ಲಾ ಕಡೆಯಲ್ಲಿಯೂ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ದಯಮಾಡಿ ಇವರು ಇಬ್ಬರೂ ಸೇರಿ ಹೊಂದಿಕೊಂಡು ಕೆಲಸಮಾಡುವಂತೆ ಏನಾದರೂ ಆದೇಶ ಕೊಡುತ್ತಿರಾ ?

ಶ್ರೀ ಕೆ. ಪ್ರಬಾಕರ್.—ಈಗಾಗಲೇ ಆದೇಶ ಕೊಟ್ಟು ಆಗಿದೆ. ಮುಂದೆ ತಮ್ಮ ಶಂಕೆ ಬರಲಾರದು. ತಾವು ಹೇಳಿದಂತೆ ಪಿ. ಎಚ್. ಇ. ಯವರು ಜಿಲ್ಲೆಯಲ್ಲಿ ಎಲ್ಲಾ ಕಡೆ ನೋಡಬೇಕಾಗಿರುವುದರಿಂದ ನಾವು ಕೂಡಲೇ ನೋಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿರುವುದು ನಾರ್ಮಲ್. ಆದ್ದರಿಂದ ಈ ತೊಂದರೆಯನ್ನು ನಿವಾರಿಸಲು ಸಾಕಷ್ಟು ಶ್ರಮಪಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.